## 2019 ಕ.ತೀ.ವ 923

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

## ಶ್ರೀ ಬಿ.ಎಸ್. ಯೋಗಾನಂದ ಕುಮಾರ್ –ವಿರುದ್ಧ– ಕರ್ನಾಟಕ ರಾಜ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಮಾನವ ಹಕ್ಕುಗಳ ಇಲಾಖೆ, ಕಾರ್ಯದರ್ಶಿಯವರಿಂದ ಪ್ರತಿನಿಧಿತ) ಮತ್ತು ಇತರರು *

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳ) ನಿಯಮಗಳು, 1977 ನಿಯಮ 5(1) ಹಾಗೂ 5(6)

ದಿನಾಂಕ: 16.3.2013ರ ಆದೇಶದ ಮೂಲಕ ಹೆಚ್ಚುವರಿ ಸರ್ಕಾರಿ ವಕೀಲರಾಗಿ ಪ್ರತ್ಯರ್ಜಿದಾರರಿಂದ ನೇಮಕಗೊಂಡ ಅರ್ಜಿದಾರರು, ಎರಡನೇ ಪ್ರತ್ಯರ್ಜಿದಾರರಿಂದ ಹೊರಡಿಸಲಾದ ಉಲ್ಲೇಖ ಸಂಖ್ಯೆ: ಕಾನೂನು/159/ಎಲ್ಎಜಿ/2011ರಲ್ಲಿ ಮಾಡಲಾದ ದಿನಾಂಕ: 07.01.2014ರ ಪ್ರಶ್ನಿತ ಅಧಿಸೂಚನೆಯನ್ನು ರದ್ದುಪಡಿಸಲು ಸರ್ಶಿಯೋರರಿ ರಿಟ್‌ಗಾಗಿ ಈ ನ್ಯಾಯಾಲಯಕ್ಕೆ ಬಂದಿದ್ದಾರೆ.

ಅರ್ಜಿದಾರರು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ 18 ವರ್ಷಗಳ ಅನುಭವವನ್ನು ಹೊಂದಿದ್ದು, ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ ವಕೀಲ ವೃತ್ತಿ ನಡೆಸುತ್ತಿದ್ದರು ಹಾಗೂ ತದನುಸಾರವಾಗಿ, ಎರಡನೇ ಪ್ರತ್ಯರ್ಜಿದಾರರು ದಿನಾಂಕ: 16.3.2013ರ ಆದೇಶದ ಮೂಲಕ, 3 ವರ್ಷಗಳವರೆಗೆ ಅಥವಾ ಮುಂದಿನ ಆದೇಶಗಳವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಆ ಅವಧಿಗಾಗಿ ಅರ್ಜಿದಾರರನ್ನು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಹೆಚ್ಚುವರಿ ಸರ್ಕಾರಿ ವಕೀಲರನ್ನಾಗಿ ನೇಮಿಸಿರುತ್ತಾರೆ ಎಂಬುದು ಅರ್ಜಿದಾರರ ವಾದವಾಗಿದೆ.

---

*ರಿಟ್ ಅರ್ಜಿ ಸಂಖ್ಯೆ: 2535/2014, ದಿನಾಂಕ 4ನೇ ಸೆಪ್ಟೆಂಬರ್, 2017.

ಅಂಗೀಕರಿಸಲಾದಂತೆ, ಪ್ರಸ್ತುತ ಪ್ರಕರಣದಲ್ಲಿ, ರಾಜ್ಯ ಸರ್ಕಾರವು '1977ರ ನಿಯಮಗಳ' 5(6)ನೇ ನಿಯಮದಡಿ ಉದ್ದೇಶಿಸಲಾದಂತೆ ಕಾರ್ಯವಿಧಾನವನ್ನು ಅನುಸರಿಸಿದೆ ಮತ್ತು ನೋಟೀಸಿನ ಬದಲಾಗಿ ಒಂದು ತಿಂಗಳ ಪ್ರತಿಧಾರಣ ಶುಲ್ಕವನ್ನು ನೀಡಿದೆ. ಅಂಗೀಕರಿಸಲಾದಂತೆ, 1977ರ ನಿಯಮಗಳಡಿ ಕಾರಣಗಳನ್ನು ನೀಡದೆಯೇ ಕಾನೂನು ಅಧಿಕಾರಿಯನ್ನು ಸೇವೆಯಿಂದ ತೆಗೆದುಹಾಕುವ ಅಧಿಕಾರವನ್ನು ಸದ್ಯದ ರಿಟ್ ಅರ್ಜಿಯಲ್ಲಿ ಪ್ರಶ್ನಿಸಿಲ್ಲ. ಸ್ವಾಮಿಗೌಡ ಎಂಬುವವರ ನೇಮಕಾತಿಯನ್ನೂ ಸಹ ಪ್ರಶ್ನಿಸಿಲ್ಲ ಮತ್ತು ರಾಜ್ಯ ಸರ್ಕಾರದಿಂದ ಹೊರಡಿಸಲಾದ ದಿನಾಂಕ: 07.01.2014ರ ಅಧಿಸೂಚನೆಯು '1977ರ ನಿಯಮಗಳ' 5(6)ನೇ ನಿಯಮದ ಮೇರೆಗಿನ ಅಧಿಕಾರಗಳನ್ನು ಚಲಾಯಿಸಿ ಮಾಡಿರುವುದಾಗಿದೆ. ಸದ್ಯದ ರಿಟ್ ಅರ್ಜಿಯನ್ನು ದಿನಾಂಕ: 17.01.2014ರಂದು ಸಲ್ಲಿಸಿದ್ದಾಗ್ಯೂ, ಪ್ರಶ್ನಿತ ಅಧಿಸೂಚನೆಯನ್ನು ತಡೆಯುವ ಮಧ್ಯಕಾಲೀನ ಆದೇಶವನ್ನು ನೀಡಿರುವುದಿಲ್ಲ. ಕಾಲವು ತಂತಾನೇ ಸರಿದುಹೋಗಿದೆ ಮತ್ತು ಸ್ವಾಮಿಗೌಡರ ನೇಮಕಾತಿ ಅವಧಿ ಎಂದರೆ, ಮೂರು ವರ್ಷಗಳ ಅವಧಿ ಮುಕ್ತಾಯಗೊಂಡಿದೆ. ಮೂಲಾಂಶಗಳಿಗೆ ಸಂಬಂಧಿಸಿದಂತೆ, ಕೋರಲಾದ ಪರಿಹಾರವು ಕೇವಲ ಔಪಚಾರಿಕತೆಗೆ ಸಂಬಂಧಿಸಿದ್ದಾಗಿದೆ.

ಅಂಗೀಕರಿಸಲಾದಂತೆ, ಈಗಿನ ಪ್ರಕರಣದಲ್ಲಿ, '1977ರ ನಿಯಮಗಳು' "ಎಲ್ಲಾ ಕಾನೂನು ಅಧಿಕಾರಿಗಳು ಸರ್ಕಾರದಿಂದ ನೇಮಕವಾಗತಕ್ಕದ್ದು ಮತ್ತು ಸರ್ಕಾರವು ಇಚ್ಛಿಸುವ ಅವಧಿಯಲ್ಲಿ ಹುದ್ದೆಯಲ್ಲಿರತಕ್ಕದ್ದು" ಎಂದು ಸ್ಪಷ್ಟವಾಗಿ ಹೇಳುತ್ತದೆ.

ರಾಜ್ಯ ಸರ್ಕಾರವು 1977ರ ನಿಯಮಗಳು 5(6)ನೇ ನಿಯಮದಡಿ ಉದ್ದೇಶಿಸಲಾದಂತೆ ಕಾರ್ಯಪ್ರಕ್ರಿಯೆಯನ್ನು ಅನುಸರಿಸಿದ ನಂತರ, ಪ್ರಶ್ನಿತ ಅಧಿಸೂಚನೆಯನ್ನು ಹೊರಡಿಸಿದೆ, ಅದು ಕಾನೂನಿಗೆ ಅನುಸಾರವಾಗಿದೆ. ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರದಿಂದ ಹೊರಡಿಸಲಾದ ದಿನಾಂಕ 07.01.2014ರ ಪ್ರಶ್ನಿತ ಅಧಿಸೂಚನೆಗೆ ಅಡಚಣೆ ಮಾಡಲು ಅರ್ಜಿದಾರನು ಯಾವುದೇ ಕಾರಣವನ್ನು ನೀಡಿಲ್ಲ. ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ಐಎಲ್‌ಆರ್ 2007 ಕೆಎಆರ್ 4653<br>ಎಸ್.ಆರ್.ಪಾಟೀಲ್ –ವಿರುದ್ಧ– ಕರ್ನಾಟಕ ರಾಜ್ಯ* | *(ಉಲ್ಲೇ) 12* |
| *2. ಐಎಲ್‌ಆರ್ 2008 ಕೆಎಆರ್ 1722<br>ಸೈಯದ್ ಮುದಿರ್ ಆಘಾ –ವಿರುದ್ಧ–<br>ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಯವರಿಂದ<br>ಪ್ರತಿನಿಧಿತ ಮತ್ತು ಇತರರು* | *(ಉಲ್ಲೇ) 13* |

ಅರ್ಜಿದಾರರ ಪರ : ಶ್ರೀ ಬಿ.ಎಸ್. ನಾಗರಾಜ್, ವಕೀಲರು.

1 ರಿಂದ 3ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಶ್ವೇತಾ ಕೃಷ್ಣಪ್ಪ, ಎಜಿಎ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

ದಿನಾಂಕ: 16.3.2013ರ ಆದೇಶದ ಮೂಲಕ ಹೆಚ್ಚುವರಿ ಸರ್ಕಾರಿ ವಕೀಲರಾಗಿ ಪ್ರತ್ಯರ್ಜಿದಾರರಿಂದ ನೇಮಕಗೊಂಡ ಅರ್ಜಿದಾರರು, ಎರಡನೇ ಪ್ರತ್ಯರ್ಜಿದಾರರಿಂದ ಹೊರಡಿಸಲಾದ ಉಲ್ಲೇಖ ಸಂಖ್ಯೆ: ಕಾನೂನು/159/ಎಲ್‌ಎಜಿ/2011ರಲ್ಲಿ ಮಾಡಲಾದ ದಿನಾಂಕ: 07.01.2014ರ ಪ್ರಶ್ನಿತ ಅಧಿಸೂಚನೆಯನ್ನು ರದ್ದುಪಡಿಸಲು ಸರ್ಶಿಯೋರರಿ ರಿಟ್‌ಗಾಗಿ ಈ ನ್ಯಾಯಾಲಯಕ್ಕೆ ಬಂದಿದ್ದಾರೆ.

2. ಅರ್ಜಿದಾರರು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ 18 ವರ್ಷಗಳ ಅನುಭವವನ್ನು ಹೊಂದಿದ್ದು, ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ ವಕೀಲ ವೃತ್ತಿ ನಡೆಸುತ್ತಿದ್ದರು ಹಾಗೂ ತದನುಸಾರವಾಗಿ, ಎರಡನೇ ಪ್ರತ್ಯರ್ಜಿದಾರರು

ದಿನಾಂಕ: 16.3.2013ರ ಆದೇಶದ ಮೂಲಕ, 3 ವರ್ಷಗಳವರೆಗೆ ಅಥವಾ ಮುಂದಿನ ಆದೇಶಗಳವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಆ ಅವಧಿಗಾಗಿ ಅರ್ಜಿದಾರರನ್ನು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಹೆಚ್ಚುವರಿ ಸರ್ಕಾರಿ ವಕೀಲರನ್ನಾಗಿ ನೇಮಿಸಿರುತ್ತಾರೆ ಎಂಬುದು ಅರ್ಜಿದಾರರ ವಾದವಾಗಿದೆ.

3. ಅರ್ಜಿದಾರರು ಹಿಂದೂ ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ರಾಜ್ಯದಲ್ಲಿ ಸರ್ಕಾರವು ಬದಲಾದಾಗ, ಮುಖ್ಯಮಂತ್ರಿಯವರ ಸೂಚನೆಯ ಮೇರೆಗೆ ಮತ್ತು ಕಾನೂನು ಸಚಿವರ ವಿಳಾಸ ಹೊಂದಿದ ದಿನಾಂಕ: 18.09.2013 ಮುಖ್ಯಮಂತ್ರಿಯವರ ಪತ್ರದ ಆಧಾರದ ಮೇಲೆ, ಮುಖ್ಯಮಂತ್ರಿಯವರ ಜಾತಿಗೆ ಸೇರಿದ ಲೇಟ್ ಕುಳ್ಳೇಗೌಡರ ಮಗನಾದ ಸ್ವಾಮಿಗೌಡ ಎಂಬುವವರನ್ನು ನೇಮಿಸಲು, ಅನುಬಂಧ–ಎ ಅನುಸಾರ ಹಾಜರುಪಡಿಸಿರುವ ದಿನಾಂಕ: 07.01.2014ರ ಪ್ರಶ್ನಿತ ಅಧಿಸೂಚನೆಯ ಮೂಲಕ ಅರ್ಜಿದಾರರನ್ನು ಹುದ್ದೆಯಿಂದ ತೆಗೆಯಲಾಯಿತು. ಆದುದರಿಂದ, ಅರ್ಜಿದಾರರು ಈ ನ್ಯಾಯಾಲಯಕ್ಕೆ ಬಂದಿದ್ದಾರೆ.

4. ಪ್ರತ್ಯರ್ಜಿದಾರ/ರಾಜ್ಯ ಸರ್ಕಾರವು ರಿಟ್ ಅರ್ಜಿಗೆ ಆಕ್ಷೇಪಣೆಗಳನ್ನು ದಾಖಲಿಸಿದೆ ಮತ್ತು ಅರ್ಜಿದಾರನು ಮೂರು ವರ್ಷಗಳ ಅವಧಿಗಾಗಿ ಅಥವಾ ಮುಂದಿನ ಆದೇಶಗಳವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ (ಸಂಕ್ಷಿಪ್ತವಾಗಿ, 1977ರ ನಿಯಮಗಳು) 5(1)ನೇ ನಿಯಮದ ಅನುಸಾರವಾಗಿ ನೇಮಕಗೊಂಡಿರುವುದರಿಂದ ಅರ್ಜಿದಾರರು ಅನುಬಂಧ–ಎ ಅನುಸಾರ ದಿನಾಂಕ: 07.01.2014ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವ ಈ ರಿಟ್ ಅರ್ಜಿಯು ಊರ್ಜಿತಯೋಗ್ಯವಲ್ಲವೆಂದು ಹಾಗೂ ಸರ್ಕಾರದಿಂದ ನೇಮಕಗೊಂಡ ಎಲ್ಲಾ ಕಾನೂನು ಅಧಿಕಾರಿಗಳು ಸರ್ಕಾರವು ಇಚ್ಛಿಸುವ ಅವಧಿಯವರೆಗೆ ಹುದ್ದೆಯಲ್ಲಿರತಕ್ಕದ್ದು ಎಂದು ವಾದಿಸಲಾಗಿದೆ. ರಾಜ್ಯ ಸರ್ಕಾರವು '1977ರ ನಿಯಮಗಳ' 5(6)ನೇ ನಿಯಮದಡಿ ಅಧಿಕಾರಗಳನ್ನು ಚಲಾಯಿಸಿ, ಪ್ರಶ್ನಿತ ಅಧಿಸೂಚನೆಯನ್ನು ಹೊರಡಿಸಿದೆ ಮತ್ತು ಅರ್ಜಿದಾರನು ಹೆಚ್ಚುವರಿ ಸರ್ಕಾರಿ ವಕೀಲರಾಗಿ ಮೂರು ವರ್ಷಗಳ ಅವಧಿಗೆ ಮುಂದುವರಿಯಲು ಯಾವುದೇ ಹಕ್ಕನ್ನು ಹೊಂದಿಲ್ಲ. ಆದುದರಿಂದ ರಿಟ್ ಅರ್ಜಿಯನ್ನು ವಜಾ ಮಾಡಲು ಕೋರಲಾಗಿದೆ.

5. ದಾವೆಯ ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ.

6. ಅನುಬಂಧ–ಎ ಅನುಸಾರ ಎರಡನೇ ಪ್ರತ್ಯರ್ಜಿದಾರರು ಹೊರಡಿಸಿದ ಪ್ರಶ್ನಿತ ಅಧಿಸೂಚನೆಯು ನೋಟೀಸು ರಹಿತವಾದದ್ದಾಗಿದೆ ಮತ್ತು ಅರ್ಜಿದಾರನ ಹೇಳಿಕೆಯನ್ನು ಸುನಾವಣೆ ಮಾಡುವ ಅವಕಾಶವಿಲ್ಲದ್ದಾಗಿದೆ ಹಾಗೂ ಈ ಕಾರಣದಿಂದ ಅದು ರದ್ದುಪಡಿಸಲು ತಕ್ಕುದಾಗಿದೆಯೆಂದು ಅರ್ಜಿದಾರನ ಪರ ಮಾನ್ಯ ವಕೀಲರಾದ ಶ್ರೀ ಬಿ.ಎಸ್. ನಾಗರಾಜ್‌ರವರು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಅರ್ಜಿದಾರರನ್ನು ಹೆಚ್ಚುವರಿ ಸರ್ಕಾರಿ ವಕೀಲರಾಗಿ ದಿನಾಂಕ: 16.3.2013ರಂದು ನೇಮಕ ಮಾಡಲಾಯಿತು ಮತ್ತು ಮುಖ್ಯಮಂತ್ರಿಯವರು ಸೇರಿದ ಸಮುದಾಯಕ್ಕೆ ಸೇರಿದ ಕುಳ್ಳೇಗೌಡರ ಮಗನಾದ ಸ್ವಾಮಿಗೌಡ ಎಂಬುವವರನ್ನು ಆ ಹುದ್ದೆಗೆ ತರಲು ಶಿಫಾರಸು ಮಾಡಿದ ಮುಖ್ಯಮಂತ್ರಿಯವರ ಪತ್ರದ ಆಧಾರದ ಮೇಲೆ, ನೇಮಕಾತಿ ದಿನಾಂಕದಿಂದ ಒಂಬತ್ತು ತಿಂಗಳುಗಳ ಅವಧಿಯೊಳಗಾಗಿ, ದಿನಾಂಕ: 07.01.2014ರಂದು ಅವರನ್ನು ಸೇವೆಯಿಂದ ತೆಗೆದುಹಾಕಲಾಯಿತೇ ಹೊರತು ರಾಜ್ಯದ ಒಳಿತಿಗಾಗಿ ಅಲ್ಲ ಎಂದು ವಾದಿಸಿದ್ದಾರೆ. ಆದುದರಿಂದ ಇವರು ಪ್ರತ್ಯರ್ಜಿದಾರರಿಂದ ಹೊರಡಿಸಲಾದ ಪ್ರಶ್ನಿತ ಅಧಿಸೂಚನೆಯನ್ನು ರದ್ದುಪಡಿಸಲು ಕೋರಿದ್ದಾರೆ.

7. ಇದಕ್ಕೆ ವಿರುದ್ಧವಾಗಿ, 1 ರಿಂದ 3 ರ ವರೆಗಿನ ಪ್ರತ್ಯರ್ಜಿದಾರರ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಶ್ರೀಮತಿ ಶ್ವೇತಾ ಕೃಷ್ಣಪ್ಪನವರು ಆಕ್ಷೇಪಣಾ ಪಟ್ಟಿಯಲ್ಲಿ ಹೇಳಲಾದ ದೃಢೋಕ್ತಿಗಳನ್ನು ಪುನರುಚ್ಚರಿಸಿ, '1977ರ ನಿಯಮಗಳ' 5(6)ನೇ ನಿಯಮದಡಿ ಅಧಿಕಾರಗಳನ್ನು ಚಲಾಯಿಸಿ ರಾಜ್ಯ ಸರ್ಕಾರವು ಹೊರಡಿಸಿದ ಪ್ರಶ್ನಿತ ಅಧಿಸೂಚನೆಯನ್ನು ಪ್ರಶ್ನಿಸಲು ಅರ್ಜಿದಾರನು ಯಾವುದೇ ಹಕ್ಕನ್ನು ಹೊಂದಿಲ್ಲ ಎಂದು ವಾದಿಸಿದ್ದಾರೆ. ಅರ್ಜಿದಾರರ ನೇಮಕಾತಿಯನ್ನು ಸರ್ಕಾರದ ಇಚ್ಛೆಯಿಂದ ಮಾಡಲಾಗಿರುವುದರಿಂದ ಅರ್ಜಿದಾರನು ಸದರಿ ಆದೇಶವನ್ನು ಪ್ರಶ್ನಿಸಲು ಯಾವುದೇ ಹಕ್ಕನ್ನು ಹೊಂದಿಲ್ಲ. ಅಂಗೀಕರಿಸಲಾದಂತೆ, ಅರ್ಜಿದಾರನು

'1977ರ ನಿಯಮಗಳನ್ನು' ಪ್ರಶ್ನಿಸಿಲ್ಲ. ಅರ್ಜಿದಾರನು ಮುಖ್ಯಮಂತ್ರಿಯವರ ವಿರುದ್ಧ ಆಪಾದನೆಗಳನ್ನು ಮಾಡಿದ್ದರೂ ಸಹ, ಸದರಿ ಆಪಾದನೆಗಳನ್ನು ಸಾಬೀತು ಮಾಡಲು ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿಲ್ಲವೆಂದು ಸಹ ಅವರು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಪ್ರಶ್ನಿತ ಅಧಿಸೂಚನೆಯನ್ನು ದಿನಾಂಕ: 7.01.2014ರಂದು ಹೊರಡಿಸಿದ್ದರೂ, ಈ ನ್ಯಾಯಾಲಯವು ಸದರಿ ಆದೇಶದ ಜಾರಿಗೊಳಿಸುವಿಕೆಯನ್ನು ತಡೆಯುವ ಯಾವುದೇ ಮಧ್ಯಕಾಲೀನ ಆದೇಶವನ್ನು ನೀಡಿಲ್ಲ ಮತ್ತು ಸ್ವಾಮಿಗೌಡ ಎಂಬುವವರನ್ನು ಹೆಚ್ಚುವರಿ ಸರ್ಕಾರಿ ವಕೀಲರನ್ನಾಗಿ ನೇಮಿಸಲಾಗಿದ್ದು, ಅವರ ನೇಮಕಾತಿಯನ್ನು ಸಹ ಸದ್ಯದ ರಿಟ್ ಅರ್ಜಿಯಲ್ಲಿ ಅರ್ಜಿದಾರನು ಪ್ರಶ್ನಿಸಿಲ್ಲ ಹಾಗೂ ಅವರ ಮೂರು ವರ್ಷಗಳ ಸೇವಾವಧಿ ಸಹ ಪೂರ್ಣಗೊಂಡಿರುತ್ತದೆ ಎಂದು ವಾದಿಸಿದ್ದಾರೆ. ಆದುದರಿಂದ, ಅವರು ಈ ರಿಟ್ ಅರ್ಜಿಯು ಊರ್ಜಿತ ಯೋಗ್ಯವಲ್ಲವೆಂದು ವಜಾ ಮಾಡಲು ಕೋರಿದ್ದಾರೆ.

8. ಎರಡೂ ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದ್ದು, '1977ರ ನಿಯಮಗಳ' 26(2)ನೇ ನಿಯಮದಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ರಾಜ್ಯ ಸರ್ಕಾರವು ಅರ್ಜಿದಾರನನ್ನು ಹೆಚ್ಚುವರಿ ಸರ್ಕಾರಿ ವಕೀಲರನ್ನಾಗಿ ನೇಮಿಸಿರುತ್ತದೆ ಎಂಬುದರಲ್ಲಿ ಯಾವುದೇ ವಿವಾದವಿಲ್ಲ. ತರುವಾಯ, '1977ರ ನಿಯಮಗಳ' 5(6)ನೇ ನಿಯಮದಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ರಾಜ್ಯ ಸರ್ಕಾರವು '1977ರ ನಿಯಮಗಳ' ಅಡಿಯಲ್ಲಿ ಉದ್ದೇಶಿಸಲಾದಂತೆ, ಒಂದು ತಿಂಗಳ ಪ್ರತಿಧಾರಣ ಶುಲ್ಕವನ್ನು ನೀಡುವ ಮೂಲಕ ಕಾರ್ಯವಿಧಾನವನ್ನು ಅನುಸರಿಸಿದ ನಂತರ, ಸದರಿ ಹುದ್ದೆಯಿಂದ ಅರ್ಜಿದಾರನನ್ನು ತೆಗೆದುಹಾಕಿತು.

9. '1977ರ ನಿಯಮಗಳ' 5(6)ನೇ ನಿಯಮದ ಉಪಬಂಧಗಳನ್ನು ಈ ಕೆಳಗಿನಂತೆ ಓದಲಾಗಿರುತ್ತದೆ:

> *"(5)ನೇ ಉಪನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು ಮತ್ತು (2)ನೇ ಉಪನಿಯಮದ ಉಪಬಂಧಗಳಿಗೆ ಸಂಬಂಧಿಸಿದಂತೆ,*

*ರಾಜ್ಯ ಸರ್ಕಾರವು ಕಾರಣವನ್ನು (ಲಿಖಿತದಲ್ಲಿ ಒಂದು ತಿಂಗಳ ನೋಟೀಸು ನೀಡುವ ಮೂಲಕ ಅಥವಾ ಅಂಥ ನೋಟೀಸಿಗೆ ಬದಲಾಗಿ ಒಂದು ತಿಂಗಳ ಪ್ರತಿಧಾರಣ ಹಕ್ಕನ್ನು ನೀಡುವ ಮೂಲಕ ಯಾವುದೇ ಕಾರಣ) ನೀಡದೆ, ಕಾನೂನು ಅಧಿಕಾರಿಯ ನೇಮಕಾತಿಯನ್ನು ಮುಕ್ತಾಯಗೊಳಿಸಬಹುದು".*

10. ಮೇಲೆ ಹೇಳಲಾದ ನಿಯಮಗಳ ಸರಳ ಓದಿನಿಂದ, 'ರಾಜ್ಯ ಸರ್ಕಾರವು ಕಾರಣವನ್ನು (ಲಿಖಿತದಲ್ಲಿ ಒಂದು ತಿಂಗಳ ನೋಟೀಸು ನೀಡುವ ಮೂಲಕ ಅಥವಾ ಅಂಥ ನೋಟೀಸಿಗೆ ಬದಲಾಗಿ ಒಂದು ತಿಂಗಳ ಪ್ರತಿಧಾರಣ ಹಕ್ಕನ್ನು ನೀಡುವ ಮೂಲಕ ಯಾವುದೇ ಕಾರಣ) ನೀಡದೆ, ಕಾನೂನು ಅಧಿಕಾರಿಯ ನೇಮಕಾತಿಯನ್ನು ಮುಕ್ತಾಯಗೊಳಿಸಬಹುದು' ಎಂಬುದು ಸ್ಪಷ್ಟವಾಗುತ್ತದೆ.

11. ಅಂಗೀಕರಿಸಲಾದಂತೆ, ಪ್ರಸ್ತುತ ಪ್ರಕರಣದಲ್ಲಿ, ರಾಜ್ಯ ಸರ್ಕಾರವು '1977ರ ನಿಯಮಗಳ' 5(6)ನೇ ನಿಯಮದಡಿ ಉದ್ದೇಶಿಸಲಾದಂತೆ ಕಾರ್ಯವಿಧಾನವನ್ನು ಅನುಸರಿಸಿದೆ ಮತ್ತು ನೋಟೀಸಿನ ಬದಲಾಗಿ ಒಂದು ತಿಂಗಳ ಪ್ರತಿಧಾರಣ ಶುಲ್ಕವನ್ನು ನೀಡಿದೆ. ಅಂಗೀಕರಿಸಲಾದಂತೆ, 1977ರ ನಿಯಮಗಳಡಿ ಕಾರಣಗಳನ್ನು ನೀಡದೆಯೇ ಕಾನೂನು ಅಧಿಕಾರಿಯನ್ನು ಸೇವೆಯಿಂದ ತೆಗೆದುಹಾಕುವ ಅಧಿಕಾರವನ್ನು ಸದ್ಯದ ರಿಟ್ ಅರ್ಜಿಯಲ್ಲಿ ಪ್ರಶ್ನಿಸಿಲ್ಲ. ಸ್ವಾಮಿಗೌಡ ಎಂಬುವವರ ನೇಮಕಾತಿಯನ್ನೂ ಸಹ ಪ್ರಶ್ನಿಸಿಲ್ಲ ಮತ್ತು ರಾಜ್ಯ ಸರ್ಕಾರದಿಂದ ಹೊರಡಿಸಲಾದ ದಿನಾಂಕ: 07.01.2014ರ ಅಧಿಸೂಚನೆಯು '1977ರ ನಿಯಮಗಳ' 5(6)ನೇ ನಿಯಮದ ಮೇರೆಗಿನ ಅಧಿಕಾರಗಳನ್ನು ಚಲಾಯಿಸಿ ಮಾಡಿರುವುದಾಗಿದೆ. ಸದ್ಯದ ರಿಟ್ ಅರ್ಜಿಯನ್ನು ದಿನಾಂಕ: 17.01.2014ರಂದು ಸಲ್ಲಿಸಿದ್ದಾಗ್ಯೂ, ಪ್ರಶ್ನಿತ ಅಧಿಸೂಚನೆಯನ್ನು ತಡೆಯುವ ಮಧ್ಯಕಾಲೀನ ಆದೇಶವನ್ನು ನೀಡಿರುವುದಿಲ್ಲ. ಕಾಲವು ತಂತಾನೇ ಸರಿದುಹೋಗಿದೆ ಮತ್ತು ಸ್ವಾಮಿಗೌಡರ ನೇಮಕಾತಿ ಅವಧಿ ಎಂದರೆ, ಮೂರು ವರ್ಷಗಳ ಅವಧಿ ಮುಕ್ತಾಯಗೊಂಡಿದೆ. ಮೂಲಾಂಶಗಳಿಗೆ ಸಂಬಂಧಿಸಿದಂತೆ, ಕೋರಲಾದ ಪರಿಹಾರವು ಕೇವಲ ಔಪಚಾರಿಕತೆಗೆ ಸಂಬಂಧಿಸಿದ್ದಾಗಿದೆ.

12. '1977ರ ನಿಯಮಗಳ' 5(6)ನೇ ನಿಯಮದ ಮತ್ತು 26(3)ನೇ ನಿಯಮದ ಉಪಬಂಧಗಳನ್ನು ಪರಿಗಣಿಸಿ, ***ಎಸ್.ಆರ್.ಪಾಟೀಲ್ –ವಿರುದ್ಧ– ಕರ್ನಾಟಕ ರಾಜ್ಯ***[1] ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಈ ಕೆಳಗಿನಂತೆ ತೀರ್ಮಾನಿಸಿದೆ:

> *"ಸರ್ಕಾರ ಮತ್ತು ಸರ್ಕಾರಿ ವಕೀಲರ ನಡುವಿನ ಸಂಬಂಧವು ನಂಬಿಕೆಯ ಸ್ವರೂಪದ್ದಾಗಿರುವುದರಿಂದ ಮತ್ತು ಸರ್ಕಾರಿ ವಕೀಲನು ಸರ್ಕಾರದ ಇಚ್ಛೆಯಿರುವ ಅವಧಿಯಲ್ಲಿ ಮಾತ್ರ ಹುದ್ದೆಯಲ್ಲಿರಬಹುದಾದ್ದರಿಂದ ಹಾಗೂ ನೇಮಕಾತಿ ಆದೇಶದ ನಿಬಂಧನೆಗಳು ಮತ್ತು ಷರತ್ತುಗಳ ಹಿನ್ನೆಲೆಯಲ್ಲಿ, ನೇಮಕಾತಿಯ ಅವಧಿ ಮುಕ್ತಾಯಗೊಳ್ಳುವುದಕ್ಕೆ ಮುಂಚೆಯೇ, 5(6)ನೇ ನಿಯಮದೊಂದಿಗೆ ಓದಲಾದ ವಿಸ್ತೃತ ನಿಯಮ 5(2)ರ ಅನುಸಾರ ನೇಮಕಗೊಂಡ ವ್ಯಕ್ತಿಯನ್ನು ಸೇವೆಯಿಂದ ತೆಗೆದುಹಾಕಲು ಸರ್ಕಾರಕ್ಕೆ ಮುಕ್ತ ಅವಕಾಶವಿದೆ".*

13. 'ಸರ್ಕಾರದ ಇಚ್ಛೆ' ಯನ್ನು ಪರಿಗಣಿಸಿ, ***ಸೈಯದ್ ಮುದಿರ್ ಆಘಾ –ವಿರುದ್ಧ– ಕರ್ನಾಟಕ ರಾಜ್ಯ, ಪ್ರಧಾನ ಕಾರ್ಯದರ್ಶಿಯವರಿಂದ ಪ್ರತಿನಿಧಿತ ಮತ್ತು ಇತರರು***[2] – ಪ್ರಕರಣದಲ್ಲಿ ಈ ನ್ಯಾಯಾಲಯವು ಈ ಕೆಳಗಿನಂತೆ ತೀರ್ಮಾನಿಸಿದೆ:

> *"7. ಸರ್ಕಾರದ ಇಚ್ಛೆಯಿಂದ ನೇಮಕಾತಿ ಎಂಬುದು ಸಾಮಾನ್ಯವಾದ ಅಥವಾ ಸಾಧಾರಣವಾದ ನೇಮಕಾತಿಗಳಂತಲ್ಲ. ಭಾರತ ಸಂವಿಧಾನದ ಭಾಗ–XIVರ ಅಧ್ಯಾಯ 1 ರಿಂದ ನಿಯಂತ್ರಿಸಲ್ಪಡುವ ಹುದ್ದೆಗಳಿಗೆ ಅನ್ವಯಿಸುವ ನೌಕರಿಭರ್ತಿಯ ಸಾಮಾನ್ಯ ಅಥವಾ ಸಾಧಾರಣ ನಿಯಮಗಳು ಸರ್ಕಾರದ ಇಚ್ಛೆಯಿಂದ ನೇಮಕವಾಗುವ ತಕ್ಷಣದ*

1. ಐಎಲ್‌ಆರ್ 2007 ಕೆಎಆರ್ 4653
2. ಐಎಲ್‌ಆರ್ 2008 ಕೆಎಆರ್ 1722

*ನೇಮಕಾತಿಗೆ ಅನ್ವಯಿಸುವುದಿಲ್ಲ. ಸಾರ್ವಜನಿಕ ಸೇವೆಯಲ್ಲಿ ಸಾಧಾರಣ ನೇಮಕಾತಿಗಳು ಅಂಥ ನೇಮಕಾತಿಯ ಅತ್ಯವಶ್ಯಕ ಗುಣಲಕ್ಷಣವಾದ ಸೇವಾವಧಿಯ ಭದ್ರತೆಗೆ ಒಳಪಡಿಸುತ್ತವೆ. ಸದ್ಯದ ಪ್ರಕರಣದಲ್ಲಿ ಈ ಗುಣಲಕ್ಷಣಗಳು ಗಮನಾರ್ಹವಾಗಿ ಕಾಣೆಯಾಗಿವೆ.*

*8. XXXX XXXX XXX*

*"ಇಚ್ಛಾ ತತ್ವ" ವು ಭಾರತ ಸಂವಿಧಾನವನ್ನು ಒಳಗೊಂಡಂತೆ ಕರ್ನಾಟಕ ರಾಜ್ಯದ ಹಲವಾರು ಅಧಿನಿಯಮಿತಿಗಳಲ್ಲಿ ಸ್ಥಾನ ಪಡೆದಿದೆ. ಭಾರತ ಸಂವಿಧಾನದ 75(2)ನೇ ಅನುಚ್ಛೇದದಡಿ, ಕೇಂದ್ರ ಸರ್ಕಾರದ ಸಚಿವರು ರಾಷ್ಟ್ರಪತಿಯುವರ ಇಚ್ಛೇಯು ಅವಧಿಯುಲ್ಲಿ ಹುದ್ದೆಯಲ್ಲಿರುತ್ತಾರೆ. 164(1)ನೇ ಅನುಚ್ಛೇದದಡಿ, ರಾಜ್ಯದ ಸಚಿವರುಗಳು ರಾಜ್ಯಪಾಲರು ಇಚ್ಛಿಸುವ ಅವಧಿಯುಲ್ಲಿ ಹುದ್ದೆಯಲ್ಲಿರುತ್ತಾರೆ. ಅದೇ ರೀತಿಯಲ್ಲಿ, 76(1)ನೇ ಅನುಚ್ಛೇದದಡಿ ರಾಷ್ಟ್ರಪತಿಯವರು ಭಾರತದ ಅಟಾರ್ನಿ ಜನರಲ್‌ರನ್ನು ನೇಮಕ ಮಾಡುತ್ತಾರೆ ಹಾಗೂ ಸದರಿ ಅನುಚ್ಛೇದದ (4)ನೇ ಖಂಡದ ದೃಷ್ಟಿಯಿಂದ, ಸದರಿ ಹುದ್ದೆಯಲ್ಲಿ ರಾಷ್ಟ್ರಪತಿಯವರು ಇಚ್ಛಿಸುವ ಅವಧಿಯಲ್ಲಿ ಇರುತ್ತಾರೆ. ರಾಜ್ಯಗಳ ರಾಜ್ಯಪಾಲರುಗಳು 155 ಮತ್ತು 156(1)ನೇ ಅನುಚ್ಛೇದಗಳಡಿ ರಾಷ್ಟ್ರಪತಿಯುವರಿಂದ ನೇಮಕ ಗೊಂಡಿರುತ್ತಾರೆ ಹಾಗೂ ರಾಜ್ಯಪಾಲರು, ರಾಷ್ಟ್ರಪತಿಯವರು ಇಚ್ಛಿಸುವ ಅವಧಿಯಲ್ಲಿ ಹುದ್ದೆಯಲ್ಲಿರುತ್ತಾರೆ."*

14. ಅಂಗೀಕರಿಸಲಾದಂತೆ, ಈಗಿನ ಪ್ರಕರಣದಲ್ಲಿ, '1977ರ ನಿಯಮಗಳು' "ಎಲ್ಲಾ ಕಾನೂನು ಅಧಿಕಾರಿಗಳು ಸರ್ಕಾರದಿಂದ ನೇಮಕವಾಗತಕ್ಕದ್ದು ಮತ್ತು ಸರ್ಕಾರವು ಇಚ್ಛಿಸುವ ಅವಧಿಯಲ್ಲಿ ಹುದ್ದೆಯಲ್ಲಿರತಕ್ಕದ್ದು" ಎಂದು ಸ್ಪಷ್ಟವಾಗಿ ಹೇಳುತ್ತದೆ.

15. ರಾಜ್ಯ ಸರ್ಕಾರವು 'ನಿಯಮಗಳು 1977'ರ 5(6)ನೇ ನಿಯಮದಡಿ ಉದ್ದೇಶಿಸಲಾದಂತೆ ಕಾರ್ಯಪ್ರಕ್ರಿಯೆಯನ್ನು ಅನುಸರಿಸಿದ ನಂತರ, ಪ್ರಶ್ನಿತ ಅಧಿಸೂಚನೆಯನ್ನು ಹೊರಡಿಸಿದೆ, ಅದು ಕಾನೂನಿಗೆ ಅನುಸಾರವಾಗಿದೆ. ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರದಿಂದ ಹೊರಡಿಸಲಾದ ದಿನಾಂಕ 07.01.2014ರ ಪ್ರಶ್ನಿತ ಅಧಿಸೂಚನೆಗೆ ಅಡಚಣೆ ಮಾಡಲು ಅರ್ಜಿದಾರನು ಯಾವುದೇ ಕಾರಣವನ್ನು ನೀಡಿಲ್ಲ. ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.